ಕೊಯ್ಯಲು ಬಾಗಿದ. ಹಣ್ಣನ್ನು ಜಗ್ಗಿ ಕೊಯ್ದ. ಆದರೆ ಅವನು ಯೋಚಿಸಿದಂತೆ ಗಿಳಿಗಳು ಆ ಹಣ್ಣಿನ ಇನ್ನೊಂದು ಬದಿಯಿಂದ ಅರ್ಧಕ್ಕಿಂತಲೂ ಹೆಚ್ಚು ಭಾಗ ತಿಂದು ಬಿಟ್ಟಿದ್ದವು. ಹಣ್ಣು ಮರದಲ್ಲಿಯೇ ಇದ್ದಿದ್ದರೆ ಗಿಳಿಗಳಿಗಾದರೂ ಆಹಾರವಾಗುತ್ತಿತ್ತು ಎನ್ನುತ್ತಾ ಕೆಳಕ್ಕೆ ಹಾಕಿದ.

ಮತ್ತೆ ಮರವನ್ನು ಸರಿಯಾಗಿ ಸುತ್ತಲೂ ನೋಡಿದ. ಹಣ್ಣು ಕಾಣಲೇ ಇಲ್ಲ. ಬಡಬಡನೇ ಕೆಳಗೆ ಇಳಿದು ಬಂದು ನಾಗನ ಹೆಗಲ ಮೇಲೆ ಕೈ ಹಾಕಿದ. ನಾಗ ಒಂದು ಬಿದಿರಿನ ನಳಿಕೆಯಿಂದ ಕೊಳಲು ತಯಾರಿಸಿ ತಂದಿದ್ದ. 'ತಗೋ ನಿನಗೆ' ಎಂದು ರೋಹಿತನಿಗೆ ಕೊಟ್ಟ. ಅದನ್ನು ನಾಗನಿಗೇ ಹಿಂದಿರುಗಿಸುತ್ತ ಊದು ನೋಡೋಣ ಎಂದ ರೋಹಿತ್. ನಾಗ ಕೊಳಲು ತೆಗೆದುಕೊಂಡು ಅವನು ಯಾವಾಗಲೂ ಹೇಳುತ್ತಿದ್ದ 'ಮಾಣಿ ಮಂಚದ ಮೇಲೆ ಕುಸುಮಾದ ಪರಿಮಳ' ಎಂಬ ಹಾಡನ್ನು ನುಡಿಸತೊಡಗಿದ. ರೋಹಿತನಿಗೆ ತನಗೆ ಒಂದು ಹಾಡೂ ನುಡಿಸಲು ಬರದು ಎಂದೆನಿಸಿ ನಾಚಿಕೆ ಆಯಿತು. ಇದನ್ನು ಇಟ್ಟುಕೋ ಎಂದು ನಾಗ ರೋಹಿತನಿಗೇ ಮತ್ತೆ ಕೊಟ್ಟ. ನಾನೂ ನಿನ್ನ ಹಾಗೆ ಕಲಿಯಬೇಕು ಎನ್ನುತ್ತಾ ಖುಷಿಯಿಂದ ಕೊಳಲನ್ನು ತೆಗೆದುಕೊಂಡ ರೋಹಿತ.

ಈಗ ಇಬ್ಬರೂ ತೋಟಕ್ಕೆ ಇಳಿದು ನಡೆದರು. ಅಷ್ಟರಲ್ಲಿ ರೋಹಿತನಿಗೆ ಏನೋ ನೆನಪಾಗಿ ಮನೆಗೆ ಹೋಗಿ ಬರುವೆನೆಂದು ಓಡಿದ. ಒಂದು ಕತ್ತಿ ಹಿಡಿದು ತಿರುಗಿ ಬಂದ. ಆಗ 'ನಾಗನ ಸಂಗಡ ಸೇರಿಕೊಂಡು ಹಾಳಾಗಬೇಡ' ಎಂದು ರೋಹಿತನ ಅಮ್ಮ ಮನೆ ಕಡೆಯಿಂದ ಕೂಗಿದ್ದು ನಾಗನಿಗೂ ಕೇಳಿಸಿತು.

'ನನ್ನ ಅಮ್ಮ ಹಾಗೇ. ಏನಾದರೂ ಹೇಳುತ್ತಲೇ ಇರುತ್ತಾಳೆ' ಅಂದ ರೋಹಿತ್. ನಾಗ ಮುಗುಳುನಕ್ಕು ಸುಮ್ಮನಾದ.

ಅವರು ತೋಟಕ್ಕೆ ಇಳಿಯುತ್ತಿದ್ದಂತೆ ನಾಲ್ಕೈದು ನವಿಲುಗಳು ಇವರನ್ನು ಕಂಡು ಓಡತೊಡಗಿದವು. ಈಗ ನಾಗ ಮತ್ತು ರೋಹಿತ ಮರೆಯಲ್ಲಿ ನಿಂತು ಅವುಗಳನ್ನೇ ನೋಡತೊಡಗಿದರು. ಎಷ್ಟು ಚೆಂದ ಕಾಣುತ್ತಿವೆ. ಆ ಗಂಡುನವಿಲಿನ ಗರಿಯಂತೂ ಎಷ್ಟು ಉದ್ದ ಆಗಿದೆ ಎಂದು ರೋಹಿತ ಹೇಳುತ್ತಿದ್ದರೆ ಅವುಗಳ ಗರಿ ಇಲ್ಲೆಲ್ಲಾದರೂ

